**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 1394/2021**

**ಪ್ರಾಸಾಃ- 2 ಚಾಸಾಃ- 6**

| | | |
|---|---|---|
| ಸಾಕ್ಷಿಯ ಹೆಸರು | : | ಮಾರೆಣ್ಣ |
| ತಂದೆಯ ಹೆಸರು | : | ತಿಪ್ಪಯ್ಯ |
| ವಯಸ್ಸು | : | 44 ವರ್ಷ |
| ವೃತ್ತಿ | : | ಆಟೋ ಚಾಲಕ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 29.10.2024**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಚಾಸಾ 1 ಮತ್ತು 8 ನನ್ನ ಅಣ್ಣನ ಮಕ್ಕಳು. ಚಾಸಾ 7, 9 ಮತ್ತು 12 ರವರ ಪರಿಚಯ ಇರುತ್ತದೆ, ಆರೋಪಿತರ ಪರಿಚಯ ಇರುತ್ತದೆ. ನಾವು ವಾಲ್ಮೀಕಿ ನಾಯಕ ಜನಾಂಗಕ್ಕೆ ಸೇರಿರುತ್ತೇವೆ.

2. 2021 ರ ಸಾಲಿನ ಗಣೇಶ ಹಬ್ಬವಾದ ಮೂರನೇ ದಿನ ಬಳ್ಳಾರಿಯ ಗಾಂಧಿ ನಗರದ ಹೌಸಿಂಗ್ ಬೋರ್ಡ್ ಹತ್ತಿರ ನನ್ನ ಅಣ್ಣನ ಮಕ್ಕಳು ಗಣೇಶನ ಮೂರ್ತಿ ಪ್ರತಿಷ್ಟಾಪನೆ ಮಾಡಿದ್ದು ಅದನ್ನು ನೋಡಲು ನಾನು ಹೋಗಿರುತ್ತೇನೆ. ಆಗ ಸಮಯ ರಾತ್ರಿ 10-30 ಗಂಟೆ ಆಗಿತ್ತು. ಆರೋಪಿತರೆಲ್ಲರೂ ಚಾಸಾ 1 ರವರನ್ನು ಬಡಿಯುತ್ತಿದ್ದಾಗ ನಾನು ಜಗಳ ಬಿಡಿಸಲು ಹೋಗಿರುತ್ತೇನೆ. ನನಗೆ 2 ನೇ ಆರೋಪಿಯು ಕಟ್ಟಿಗೆಯಿಂದ ಬಲಭಾಗದ ಹುಬ್ಬಿಗೆ ಹೊಡೆದಿರುತ್ತಾನೆ. ಕಟ್ಟಿಗೆಯಿಂದ ಚಾಸಾ 1 ರವರಿಗೆ 1 ನೇ ಆರೋಪಿಯು ಎಡಭಾಗದ ಹುಬ್ಬಿಗೆ ಹೊಡೆದಿರುತ್ತಾನೆ. 3 ಮತ್ತು 4 ನೇ ಆರೋಪಿತರು ಕೈ ಕಾಲುಗಳಿಂದ ಚಾಸಾ 1 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ. ನನಗೆ ಏಟು ಬಿದ್ದ ಮೇಲೆ ಮಬ್ಬು ಬಂದಿರುತ್ತದೆ. ನನ್ನ ಅಣ್ಣನ ಮಗ ಚಾಸಾ 8 ಆತನ ಗೆಳೆಯರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ವಾಲ್ಮೀಕಿ ಸೂಳೆ ಮಕ್ಕಳೇ ಇಲ್ಲಿ

ಗಣೇಶನನ್ನು ಹೇಗೆ ಕೂಡಿಸಿರುತ್ತೀರಿ ಎಂದು ಆರೋಪಿತರು ನಮಗೆ ಬೈದು ಜಗಳ ಮಾಡಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರಿರುವ 1 ರಿಂದ 4 ನೇ



ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮು ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಪಿ ಆರ್ ಬಿ ಮತ್ತು ಎಸ್ ಆರ್ ಪಿ ವಕೀಲರಿಂದಃ**

3. ನಾನು 9 ನೇ ತರಗತಿವರೆಗೆ ಓದಿರುತ್ತೇನೆ. ನನ್ನದು ಸ್ವಂತ ಆಟೋ ಇದ್ದು ಅದನ್ನು ನಡೆಸುತ್ತೇನೆ. ಕೆಇಬಿ ಸರ್ಕಲ್ ಗೂ ಮತ್ತು ಹೌಸಿಂಗ್ ಬೋರ್ಡ್ ಹತ್ತಿರ ಇರುವ ಪಾರ್ಕ್ ಗೂ 3 ಕಿ. ಮೀ. ದೂರ ಇರುತ್ತದೆ ಎಂದರೆ ಸರಿಯಲ್ಲ. ಅದು 1.5 ಕಿ.ಮೀ ದೂರ ಇರುತ್ತದೆ. ಇಬ್ಬರು ಆರೋಪಿಗಳ ಮನೆಯು ಕೆಇಬಿ ಸರ್ಕಲ್ ಬಳಿ ಇದ್ದು, ಇಬ್ಬರು ಆರೋಪಿಗಳ ಮನೆಯು ಸಿದ್ದಾರ್ಥ ಕಾಲೋನಿ ಕಾಲುವೆ ಬಳಿ ಇರುತ್ತದೆ. ನನ್ನ ಅಣ್ಣನ ಮಕ್ಕಳು ಪ್ರತಿವರ್ಷ ಅದೇ ಜಾಗದಲ್ಲಿ ಗಣೇಶನ ಮೂರ್ತಿ ಪ್ರತಿಷ್ಟಾಪನೆ ಮಾಡುತ್ತಾರೆ. ನಮ್ಮ ಮನೆಗಳು ಸಹ ಹೌಸಿಂಗ್ ಬೋರ್ಡ್ ನಲ್ಲಿ ಇರುತ್ತವೆ. ಕೆಇಬಿ ಸರ್ಕಲ್ ನ ಬಸವೇಶ್ವರ ನಗರದಲ್ಲಿ ಸಾರ್ವಜನಿಕ ಗಣಪತಿ ಪ್ರತಿಷ್ಟಾಪನೆ ಮಾಡುತ್ತಾರೆ ಎಂದರೆ ಸರಿ. ಸದರಿ ಬಸವೇಶ್ವರ ನಗರದ ಗಣಪತಿಯನ್ನು ಮೋಕಾ ರಸ್ತೆಯಲ್ಲಿರುವ ಕಾಲುವೆಗೆ ವಿಸರ್ಜನೆಗೆ ಕಳುಹಿಸುತ್ತಾರೆ ಎಂದರೆ ಸರಿ. ಹೌಸಿಂಗ್ ಬೋರ್ಡ್ ಬಳಿ ಕೂಡಿಸಿರುವ ಗಣಪತಿಗೆ ಕಪಪ್ಪಗಲ್ ರಸ್ತೆಯಲ್ಲಿರುವ ಕಾಲುವೆಯು ಹತ್ತಿರವಾಗುತ್ತದೆ ಎಂದರೆ ಸರಿ. ಕಪ್ಪಗಲ್ ರಸ್ತೆಯಲ್ಲಿರುವ ಕಾಲುವೆಗೆ ಗಾಂಧಿನಗರ, ಹೌಸಿಂಗ್ ಬೋರ್ಡ್, ಕಪ್ಪಗಲ್ ರಸ್ತೆಯಲ್ಲಿರುವ ಸಾರ್ವಜನಿಕ ಗಣಪತಿಗಳನ್ನು ಸದರಿ ಕಪ್ಪಗಲ್ ರಸ್ತೆಯುಲ್ಲಿರುವ ಕಾಲುವೆಯಲ್ಲಿ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿ.

4. ನಾವು ವಿಮ್ಸ್ ಆಸ್ಪತ್ರೆ ಕಡೆ ಹೋಗಬೇಕೆಂದರೆ ಹೌಸಿಂಗ್ ಬೋರ್ಡ್ ನಿಂದ ನಾರಾಯಣ ರೆಡ್ಡಿ ಆಫೀಸ್ ಸರ್ಕಲ್, ದುರ್ಗಮ್ಮ ಗುಡಿ ಸರ್ಕಲ್, ರಾಯಲ್ ಸರ್ಕಲ್, ಮೋತಿ ಸರ್ಕಲ್ ನಂತರ ವಿಮ್ಸ್ ಆಸ್ಪತ್ರೆಗೆ ಹೋಗುತ್ತೇವೆ.

ಸದರಿ ರಾಯಲ್ ಸರ್ಕಲ್‌ನಿಂದ ಗಾಂಧಿನಗರ ಪೋಲೀಸ್ ಠಾಣೆಯು ಅರ್ಧ ಕಿ. ಮೀ. ಒಳಗಡೆ ಅಂತರದಲ್ಲಿರುತ್ತದೆ ಎಂದರೆ ಸರಿ.

-2- ಪ್ರಾ ಸಾ 2 **ವಿಶೇಷ ಮೊಕದ್ದಮೆ ಸಂಖ್ಯೆಃ- 1394/2021**

ನಾನು ವಿಮ್ಸ್ ಆಸ್ಪತ್ರೆಗೆ ಹೋಗುವಾಗ ಅಥವಾ ಬರುವಾಗ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿ.

5. ನಾನು ಹೇಳಿದ ದಿನ ಆರೋಪಿತರು ಆ ಸ್ಥಳದಲ್ಲಿ ಬಂದಿಲ್ಲ, ಜಾತಿನಿಂದನೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ನಮ್ಮನ್ನು ಬೈದಿಲ್ಲ ಮತ್ತು ಹೊಡೆ ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳ ಎಂದು ಹೇಳುವ ಸ್ಥಳದಲ್ಲಿ ಆ ದಿನ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಹೊಡೆದ ಏಟಿನಿಂದ ಮಬ್ಬು ಬಂದಿರುತ್ತದೆ ಎಂದು ಪೋಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ನಾನು ಹೇಳಿರುತ್ತೇನೆ. ನನ್ನ ಕೆಲಸದಲ್ಲಿ ಬಿದ್ದು ಗಾಯಪಡಿಸಿದ್ದನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಮು ಮಾ 1 ಮತ್ತು 2 ರಂತಹ ಕಟ್ಟಿಗೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಆದರೆ ಆರೋಪಿತರು ಆ ದಿನ ತೆಗೆದುಕೊಂಡು ಬಂದ ಕಟ್ಟಿಗೆಗಳು ಮು ಮಾ 1 ಮತ್ತು 2 ಆಗಿರುತ್ತವೆ. ಚಾಸಾ 1 ರವರು ಕೊಟ್ಟ ಸುಳ್ಳು ದೂರಿಗೆ ಪೂರಕವಾಗಿ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 1394/2021**

**ಪ್ರಾಸಾಃ- 3 ಚಾಸಾಃ- 8**

| | | |
|---|---|---|
| ಸಾಕ್ಷಿಯ ಹೆಸರು | : | ಶಶಿಕುಮಾರ್ |
| ತಂದೆಯ ಹೆಸರು | : | ಟಿ.ನಾಗರಾಜ್ |
| ವಯಸ್ಸು | : | 28 ವರ್ಷ |
| ವೃತ್ತಿ | : | ಪಂಚರ್ ಶಾಪ್‌ನಲ್ಲಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 29.10.2024**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಚಾಸಾ 1 ನನ್ನ ತಮ್ಮ. ಚಾಸಾ 6 ನನ್ನ ಚಿಕ್ಕಪ್ಪ. ಚಾಸಾ 7, 9 ರಿಂದ 12 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ನಾವು ವಾಲ್ಮೀಕಿ ನಾಯಕ ಜನಾಂಗಕ್ಕೆ ಸೇರಿರುತ್ತೇವೆ.

2. 2021 ರ ಸಾಲಿನ ಗಣೇಶ ಹಬ್ಬವಾದ ಮೂರನೇ ದಿನ ಬಳ್ಳಾರಿಯ ಗಾಂಧಿ ನಗರದ ಹೌಸಿಂಗ್ ಬೋರ್ಡ್ ಹತ್ತಿರ ಗಣೇಶನನ್ನು ಚಾಸಾ 7 ರವರು ಬಿಡಲು ಹೋದಾಗ ಆರೊಪಿತರು ಆತನ ಜೊತೆ ಜಗಳ ಮಾಡಿದರು. ಸದರಿ ಗಾಂದಿನಗರದ ಹೌಸಿಂಗ್ ಬೋರ್ಡ್ ಪಾರ್ಕ್ ಬಳಿ ನಾವು ಗಣಪತಿ ಮೂರ್ತಿಯನ್ನು ಪ್ರತಿಷ್ಟಾಪನೆ ಮಾಡಿದಾಗ ಆಗ ರಾತ್ರಿ 10-00 ಅಥವಾ 10-30 ರ ಸುಮಾರಿಗೆ ಚಾಸಾ 7 ರವರ ಜೊತೆ ಗಲಾಟೆಯಾದ ಕಾರಣ ಆರೋಪಿತರು ನಮ್ಮ ಗಣಪತಿ ಬಳಿ ಬಂದು ಚಾಸಾ 1 ರವರಿಗೆ ವಾಲ್ಮೀಕಿ ಸೂಳೆ ಮಕ್ಕಳೇ ನಿಮ್ಮನ್ನು ಬಿಡುವುದಿಲ್ಲ ಎಂದು ಬೈದು ಹೋಗಿರುತ್ತಾರೆ. ನಿಮಗೆ ಒಂದು ಗತಿ ಕಾಣಿಸುತ್ತೇವೆ ಎಂದು ಆರೋಪಿತರು ಹೇಳಿ ಹೋದರು. ನಂತರ ಆರೋಪಿತರು

ಮರಳಿ ಬಂದು ಚಾಸಾ 1 ರವರಿಗೆ 1 ನೇ ಆರೋಪಿಯು ಕಟ್ಟಿಗೆಯಿಂದ ಎಡಭಾಗದ ಕಣ್ಣಿನ ಮೇಲೆ ಹೊಡೆದನು. 2 ನೇ ಆರೋಪಿಯು ಚಾಸಾ 6 ರವರಿಗೆ ಕಟ್ಟಿಗೆಯಿಂದ ಬಲಭಾಗದ ಕಣ್ಣಿನ ಮೇಲೆ ಹೊಡೆದನು. ಆರೋಪಿತರು



ಹೋದರು, ನಂತರ ನಾನು ಚಾಸಾ 1 ಮತ್ತು 6 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಸಾಕ್ಷಿಯು ಮು ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಇಬ್ಬರು ಆರೋಪಿತರು ಚಾಸಾ 1 ಮತ್ತು 6 ರವರಿಗೆ ಕೈಯಿಂದ ಹೊಡೆದಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಪಿ ಆರ್ ಬಿ ಮತ್ತು ಎಸ್ ಆರ್ ಪಿ ವಕೀಲರಿಂದಃ**

3. ನನ್ನ ಪಂಚರ್ ಅಂಗಡಿಯು ಮೋಕಾ ರಸ್ತೆಯ ವಾಟರ್ ಬೂಸ್ಟರ್ ಬಳಿ ಇರುತ್ತದೆ. ಸದರಿ ಅಂಗಡಿಯು ನನ್ನ ಸ್ವಂತ ಮಾಲೀಕತ್ವದಲ್ಲಿರುತ್ತದೆ. ಸದರಿ ಅಂಗಡಿಯಲ್ಲಿ ನಾನು ಒಬ್ಬನೇ ಕೆಲಸ ಮಾಡುತ್ತೇನೆ. ನಾನು 8 ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯು ಗಾಂಧಿನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುತ್ತದೆ.

4. ಚಾಸಾ 7 ರವರು ನನ್ನ ಸ್ನೇಹಿತ. ಈ ಪ್ರಕರಣದಲ್ಲಿ ಚಾಸಾ 7 ರವರೂ ಸಹ ಆರೋಪಿಯಾಗಿದ್ದರು ಎಂದರೆ ಸರಿ. ಚಾಸಾ 1 ರವರಿಗೂ ಸಹ ಚಾಸಾ 7 ರವರು ಆತ್ಮೀಯ ಸ್ನೇಹಿತರು ಎಂದರೆ ಸ್ನೇಹಿತರಾಗಿರುತ್ತಾರೆ. ನನ್ನ ಚಿಕ್ಕಪ್ಪನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಆತನು ಆರಾಮಾಗಿದ್ದನು ಎಂದರೆ ಸರಿಯಲ್ಲ. ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನಮ್ಮನ್ನು ವಾಲ್ಮೀಕಿ ಸೂಳೆ ಮಕ್ಕಳೇ ಎಂದು

ಬೈದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ 1 ರವರಿಗೆ ಹಾಗೂ 2 ನೇ ಆರೋಪಿಯು ಚಾಸಾ 6 ರವರಿಗೆ ಹಾಗೂ 3 ಮತ್ತು 4 ನೇ ಆರೋಪಿತರು ಚಾಸಾ 1 ರವರಿಗೆ ಕೈಗಳಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. 3 ಮತ್ತು 4 ನೇ ಆರೋಪಿತರು ವಾಲ್ಮೀಕಿ ಜನಾಂಗದವರು ಎಂದರೆ



ಸರಿ. ಚಾಸಾ 1 ರವರ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ ಘಟನೆಯಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2ನ್ನು ಮೊದಲಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಶೇಷ ನ್ಯಾಯಾಲಯ, ಬಳ್ಳಾರಿ.**